**ಕೃಷಿ ವಿಶ್ವ ವಿದ್ಯಾನಿಲಯ**

**ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)**

**ಜಿ.ಕೆ.ವಿ.ಕೆ., ಬೆಂಗಳೂರು–560065**

*** ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ ***

**ದಿನಾಂಕ:** 20.11.2020

## ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೀಮಿತವಾಗಿದೆ

### ಈ ವಾರದ ಹವಾಮಾನ ಮುನ್ಸೂಚನೆ(ಭಾರತೀಯ ಹವಾಮಾನ ಇಲಾಖೆ)

### (ದಿನಾಂಕ 21-11-2020 ರಿಂದ 25-11-2020 ವರೆಗೆ)

| ನಿಯತಾಂಕಗಳು | 21.11.2020 | 22.11.2020 | 23.11.2020 | 24.11.2020 | 25.11.2020 |
|---|---|---|---|---|---|
| ಮಳೆ (ಮಿ ಮಿ) | 0 | 0 | 0 | 0 | 1 |
| ಗರಿಷ್ಠ ಉಷ್ಣಾಂಶ(ಡಿ.ಸೆ. ) | 29 | 29 | 29 | 29 | 28 |
| ಕನಿಷ್ಠ ಉಷ್ಣಾಂಶ(ಡಿ.ಸೆ. ) | 18 | 18 | 17 | 18 | 18 |
| ಮೋಡ ( ಪ್ರಮಾಣ) | 4 | 2 | 2 | 2 | 3 |
| ಅರ್ದ್ರತೆ 7.20 ಬೆ (ಶೇ) | 84 | 83 | 84 | 83 | 83 |
| ಅರ್ದ್ರತೆ 2.20 ಮ (ಶೇ) | 61 | 61 | 60 | 60 | 60 |
| ಗಾಳಿಯ ವೇಗ(ಕಿ.ಮಿ/ಗಂಟೆಗೆ) | 7 | 8 | 7 | 7 | 8 |
| ಗಾಳಿಯ ದಿಕ್ಕು ( ಡಿಗ್ರಿ) | 108 | 72 | 72 | 68 | 68 |

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮುಂದಿನ ನಾಲ್ಕೈದು ದಿನಗಳಲ್ಲಿ ಮಳೆಯಾಗುವ ಸಾಧ್ಯತೆ ಕಡಿಮೆ. ದಿನದ ಗರಿಷ್ಠ ಉಷ್ಣಾಂಶ **28.0–29.0$^{o}$C** ಮತ್ತು ಕನಿಷ್ಠ **17.0–18.0$^{o}$C** ಇರುವ ಸಾಧ್ಯತೆ ಇದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ **83–84 %** ಇದ್ದು ಮಧ್ಯಾಹ್ನ **60–61 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **7–8** ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

### "ಅನುರಾಧೆ ಬಂದರೆ ಬಿತ್ತಿದಷ್ಟೇ ಬೆಳೆ!"

- ಅನುರಾಧ ಮಳೆಯ ಕಾಲವು ನವೆಂಬರ್ ತಿಂಗಳ 20 ರಿಂದ ಡಿಸೆಂಬರ್ 2 ರವರೆಗೆ ಇರುತ್ತದೆ. ಈ ನಕ್ಷತ್ರದ ಪೂರ್ವ ಒಣ ವಲಯದ ಸರಾಸರಿ ಮಳೆಯು 13.0 ಮಿ.ಮೀ. ವರೆಗೆ ಮಳೆಯಾಗುತ್ತದೆ.

### ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

| ಬೆಳೆಗಳು | ಹವಾಮಾನ ಆಧಾರಿತ ಕೃಷಿ ಸಲಹೆಗಳು |
|---|---|
| ಸಾಮಾನ್ಯ /ಹಿಂಗಾರು ಬೆಳೆಗಳು | ➢ ಮುಂಗಾರು ಬೆಳೆಗಳ ಕಟಾವು ಮಾಡಲು ಸೂಕ್ತ ಕಾಲ ಮತ್ತು ಕಟಾವಾದ ರಾಗಿ, ಶೇಂಗಾ ಮತ್ತು ಮೆಕ್ಕೆಜೋಳ ಬೆಳೆಗಳನ್ನು ಬಿಸಿಲಿನಲ್ಲಿ ಒಣಗಿಸುವುದು, ಒಕ್ಕಣೆಯನ್ನು ಮಾಡಿ ಚೀಲದಲ್ಲಿ ಸೇಖರಿಸಿ.<br>➢ ರಾಗಿ ಬೆಳೆಯಲ್ಲಿ ತೆನೆಯನ್ನು ಕೋಯ್ಲು ಮಾಡಿ ಬಿಸಿಲಿನಲ್ಲಿ ಒಣಗಿಸಿ ಮತ್ತು ಕಳೆದ ವಾರದಲ್ಲಿ ಹೆಚ್ಚಾಗಿ ಮಳೆಯಾಗಿರುವುದರಿಂದ ಹಾಗು ಗಾಳಿಯಿಂದ ರಾಗಿಯು ಚಾಪೆಯ ಹಾಗೆ ನೆಲದಲ್ಲಿ ಬಿದ್ದಿರುವ ಕಾರಣ ಯಂತ್ರೋಪಕರಣವನ್ನು ಬಳಸದೆ ಕುಡುಗೋಲಿನಲ್ಲಿ ಕಟಾವು ಮಾಡಲು ತಿಳಿಸಲಾಗಿದೆ ಮತ್ತು ಕಟಾವಾದ ಬೆಳೆಗಳನ್ನು ಒಗ್ಗೂಡಿಸಿ ಮೆದೆಹಾಕುವುದು ಸೂಕ್ತ.<br>➢ ಹಿಂಗಾರು ಬೆಳೆಗಳನ್ನು ಬಿತ್ತಲು ಇದು ಸೂಕ್ತ ಕಾಲ. ಬಿತ್ತನೆಗೆ ತೇವಾಂಶದ ಆಧಾರದ ಮೇಲೆ ಬಿತ್ತನೆಯನ್ನು ಕೈಗೊಳ್ಳಿ.<br>**ಈ ಕೆಳಗಿನ ಕಡಿಮೆ ಅವಧಿ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ**<br>➢ ಅಲಸಂದೆ : ಟಿ.ವಿ.ಎಕ್ಸ್–944, ಕೆ.ಬಿ.ಸಿ–1, ಅವರೆ–ಎಚ್.ಎ–3 ಮತ್ತು 4,ಸೂರ್ಯಕಾಂತಿ: ಕೆ.ಬಿ.ಎಸ್.ಹೆಚ್–1,41,42,44 ಮತ್ತು 53, ಹುರುಳಿ: ಪಿ.ಎಚ್.ಜಿ–9 ಮತ್ತು ಕೆ.ಬಿ.ಎಚ್–1, ಹುಚ್ಚೆಳ್ಳು ತಳಿಗಳನ್ನು ಬಿತ್ತನೆ/ನಾಟಿ ಮಾಡುವುದು. |
| | ಹೈನುಗಾರಿಕೆ |
| ಪಶುಸಂಗೋಪನೆ | ➢ ಹಿಂಡಿ ಬೂಸವನ್ನು ಮೂರು–ನಾಲ್ಕು ಭಾಗ ಮಾಡಿ ಹಗಲಿನಲ್ಲಿ ಸಂಜೆ ಮತ್ತು ರಾತ್ರಿಯಲ್ಲಿ ತಿನ್ನಿಸುವುದು ಉತ್ತಮ.<br>➢ ಹೆಚ್ಚು ಕರಾವು ಕೊಡುವ ರಾಸುಗಳ ಆಹಾರದಲ್ಲಿ ಕನಿಷ್ಠ ಶೇ. 17 ರಷ್ಟು ನಾರಿನ ಅಂಶವಿರಬೇಕು ( ಎನ್.ಡಿ.ಎಫ್. ಶೇ.22 ರಷ್ಟಿರಬೇಕು.) |

| | |
|---|---|
| **ಕೋಳಿ ಸಾಕಾಣಿಕಾ** | ➢ ಚಳಿಗಾಲವಿರುವುದರಿಂದ ಕೋಳಿ ಸಾಕಾಣಿಕಾ ಕೊಠಡಿಯಲ್ಲಿ ಉಷ್ಣಾಂಶದ ಸ್ಥಿರತೆ ಕಾಪಾಡಲು ವಿದ್ಯುತ್ ಬಲ್ಫ್ ಗಳ ಮುಖಾಂತರ ಸ್ಥಿರತೆಯನ್ನು ಕಾಪಾಡುತ್ತದೆ.<br>➢ ಕೋಳಿ ಸಾಕಾಣಿಕಾ ಕೊಠಡಿಯಲ್ಲಿ ಕಿಟಕಿಯಲ್ಲಿ ಚಳಿಗಾಳಿಯು ಹೆಚ್ಚಾಗಿ ಬೀಸುವುದರಿಂದ ಪರದೆಯನ್ನು ಮುಚ್ಚಿ ಚಳಿಯಿಂದ ರಕ್ಷಿಸಬೇಕು.<br>➢ ಕೋಳಿ ಸಾಕಾಣಿಕಾ ಕೊಠಡಿಯಲ್ಲಿ ಅವಗವಾಗ ಕೋಳಿ ಹಿಕ್ಕೆಯನ್ನು ಸ್ವಚ್ಚಗೊಳಿಸಬೇಕು ಇದರಿಂದ ಅಮ್ಮೊನಿಯ ಶೇಖರಣೆಯಾಗುವುದು ತಪ್ಪುತ್ತದೆ. |
| **ರೇಷ್ಮೆ ಸಾಕಾಣಿಕೆ** | ➢ ಊಜಿನೊಣದಿಂದ ರೇಷ್ಮೆ ಹುಳುವನ್ನು ಸಂರಕ್ಷಿಸಲು ವಿನ್ಯಾಸಗೊಳಿಸಿದ ಊಜಿ ನಿಯಂತ್ರಣ ಬಲೆ ಬಳಸಬೇಕು.<br>➢ ಊಜಿ ನಿಯಂತ್ರಿಸುವ ರಾಸಾಯನಿಕಗಳಾದ ಊಜಿ ಗುಳಿಗೆ ಶಿಫಾರಸ್ಸು ಮಾಡಿದಂತೆ ಬಳಸಿ ನೀರಿನಲ್ಲಿ ಬೆರೆಸಿ ಕಿಟಕಿ ಬಾಗಿಲುಗಳ ಬಳಿ ಊಜಿ ಹಾರಾಡುವ ಜಾಗದಲ್ಲಿಡಬೇಕು. |

**ನೋಡಲ್ ಅಧಿಕಾರಿ:**
ಕೃಷಿ ಹವಾಮಾನ ವಿಭಾಗ
**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**